**2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃಗೋಕಾಕ**

**ಸಿ.ಸಿ ನಂ. 2638/2014**

ದಿಃ **25-10-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು**.**

ಚಾ.ಸಾ-4 ಪ್ರಾ.ಸಾ-2

| | | |
|---|---|---|
| ಹೆಸರು | : | ಮಾರುತಿ ರಾಯಪ್ಪಾ ಜೋಡಟ್ಟಿ |
| ತಂದೆಯ ಹೆಸರು | : | ರಾಯಪ್ಪಾ ಜೋಡಟ್ಟಿ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಖನಗಾಂವ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ತಮ್ಮ. ಚಾಸಾ-5, 6 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಅಣ್ಣ . 2 ನೇ ಆರೋಪಿ ನನ್ನ ವೈನಿ. 3 ನೇ ಆರೋಪಿ ನನ್ನ ಅಣ್ಣನ ಮಗ.

ಮಮದಾಪೂರ ಹದ್ದಿಯಲ್ಲಿರುವ ಪಂಚನಾಯಕನಹಟ್ಟಿ ಊರಲ್ಲಿ ನಮಗೆ ಸೇರಿದ 21 ಎಕರೆ ಹೊಲ ಇದೆ. ಸದರಿ 21 ಎಕರೆ ಹೊಲದಲ್ಲಿ ಐದು ಪಾಲುಗಳನ್ನು ನಾವು ಐದು ಜನ ಅಣ್ಣತಮ್ಮಂದಿರು ಮಾಡಿಕೊಂಡಿರುತ್ತೇವೆ. ನನ್ನ ತಮ್ಮನಿಗೆ ಹೊಲದಲ್ಲಿ ನೀರು ಬಿಡುವ ಪಾಳಿ ಬಂದಿತ್ತು. ನನ್ನ ತಮ್ಮ ನೀರು ಬಿಡಲು ಮೋಟಾರ ಚಾಲು ಮಾಡಲು ಹೋದಾಗ ನನ್ನ ಅಣ್ಣ, ನನ್ನ ವೈನಿ ಹಾಗೂ ನನ್ನ ಅಣ್ಣನ ಮಗ ಕೂಡಿಕೊಂಡು ನನ್ನ ತಮ್ಮನಿಗೆ ಹೊಡೆದರು. ನನ್ನ ತಮ್ಮನ ತಲೆಗೆ, ಬೆನ್ನಲ್ಲಿ, ಕೈಗಳಿಗೆ

ಪೆಟ್ಟಾಗಿರುತ್ತದೆ. ನನ್ನ ತಮ್ಮನನ್ನು ಸರಕಾರಿ ಆಸ್ಪತ್ರೆಯಲ್ಲಿ ದಾಖಲು ಮಾಡಿದೆವು. ನಮ್ಮ ಮೇಲೆಯೇ ನಮ್ಮ ಅಣ್ಣ ಆತನ ಮೇಲೆ, ನನ್ನ ವೈನಿ ಹಾಗೂ ಅಣ್ಣನ ಮಗನನ್ನು ಬಡಿದಿದ್ದೆವೆ ಎಂದು ದೂರನ್ನು ದಾಖಲಿಸಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಲು ಮಾನ್ಯ ಸ.ಸ.ಅ. ಅವರು ಅನುಮತಿ ಕೋರಿದ್ದು, ಪರಿಶೀಲಿಸಿ ನೋಡಿ ಅನುಮತಿ ನೀಡಲಾಯಿತು**)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 26-04-2014 ರಂದು ಬೆಳಿಗ್ಗೆ 8-00 ಗಂಟೆಗೆ ಘಟನೆಯು ಆಗಿದೆ ಎಂದರೆ ಸರಿ. ಆರೋಪಿತರು ನನ್ನ ತಮ್ಮನಿಗೆ ಹಲ್ಲೆ ಮಾಡಿದ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ದಿಃ 26-04-2014 ರಂದು ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಂಜಸ ಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** --ಇಲ್ಲಾ --

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ಶ್ರೀ. ಅಭಿನಯ)**

**C/c 2 ನೇ ಹೆ.ದಿ.&ನ್ಯಾ.ದಂ.,ಗೋಕಾಕ.**